

# ಪುಟ್ಟಿ ಕಾಣಲಿಲ್ಲ...

■ ಚಿತ್ರ–ಕಥೆ: **ತಮ್ಮಣ್ಣ ಬೀಗಾರ**

ಅಜ್ಜ ಅಜ್ಜಿ ಎಂದರೆ ಪುಟ್ಟಿಗೆ ತುಂಬಾ ಪ್ರೀತಿ. ದಿನಾಲು ಶಾಲೆಗೆ ಹೋಗುವಾಗ ಅಜ್ಜಿ ಗೇಟಿನವರೆಗೂ ಬಂದು ಪುಟ್ಟಿಯನ್ನು ಗೇಟು ದಾಟಿಸಿ ಟಾಟಾ ಮಾಡಿ ಹೋಗುತ್ತಾರೆ. ಒಮ್ಮೊಮ್ಮೆ ಅಜ್ಜ ಅಜ್ಜಿ ಇಬ್ಬರೂ ಬರುತ್ತಾರೆ. ಪುಟ್ಟಿಯ ಶಾಲೆ ಮನೆಯಿಂದ ದೂರವಿಲ್ಲ. ಮಳೆ ಶುರುವಾದಾಗ ಪುಟ್ಟಿಗೆ ಕೊಡೆ ಬಿಡಿಸಿಕೊಂಡು ಶಾಲೆಗೆ ಹೋಗುವುದನ್ನು ಅಜ್ಜಿಯೇ ಕಲಿಸಿದಳು. ಕೊಡೆಯನ್ನು ಹೇಗೆ ಹಿಡಿದುಕೊಳ್ಳಬೇಕು ಎಂಬುದನ್ನೆಲ್ಲಾ ಅವಳೇ ಹೇಳಿದ್ದಳು. ಗಾಳಿ ಬರುವ ದಿಕ್ಕಿಗೆ ಕೊಡೆಯನ್ನು ವಾಲಿಸಿ ಹಿಡಿದರೆ ಆ ಕಡೆಯಿಂದ ಮಳೆಯ ಹನಿಗಳು ಎರಚುವುದಿಲ್ಲ. ಕೊಡೆಯೊಳಗೆ ಗಾಳಿ ಹೊಕ್ಕು ಕೊಡೆಯನ್ನು ಹಾರಿಸಿಕೊಂಡು ಹೋಗುವುದೂ ಇಲ್ಲ ಎಂದೆಲ್ಲಾ ಅಜ್ಜಿ ಹೇಳಿದ್ದಳು. ಆ ದಿವಸ ಪುಟ್ಟಿಯ ಗೆಳತಿ ಗಿರಿಜಾಳ ಕೊಡೆಯೊಳಗೆ ಗಾಳಿ ಹೊಕ್ಕು ಕೊಡೆ ಹಾರಿಹೋಗಿತ್ತು. ಪಾಪ ಗಿರಿಜಾ ಅಳತೊಡಗಿದ್ದಳು. ಪುಟ್ಟಿ ತನ್ನ ಕೊಡೆಯಲ್ಲಿ ಸೇರಿಸಿಕೊಂಡು ನಿಧಾನವಾಗಿ ಅವಳನ್ನು ಮನೆಗೆ ಬಿಟ್ಟು ಬಂದಳು. ಅವಳ ಅಪ್ಪ ಹೋಗಿ ನಂತರ ಕೊಡೆ ತಂದರಂತೆ.

ಅದೇ ದಿನ ಸಂಜೆ ಪುಟ್ಟಿಗೆ ಮೈ ಬಿಸಿಯಾಗಿ ಜ್ವರ ಬಂತು. ಅಜ್ಜಿ ಪುಟ್ಟಿಯ ಬಳಿಯೇ ಕುಳಿತಿದ್ದಳು. ಏನೇನೋ ಕಷಾಯ ಮಾಡಿ ಕುಡಿಯಲು ಕೊಡುತ್ತಾ ಜ್ವರ ಬೇಗ ಕಡಿಮೆಯಾಗಲಿ ಎಂದು ಹೇಳುತ್ತಿದ್ದಳು. ಪುಟ್ಟಿಗೆ ಕಣ್ಣೆಲ್ಲ ಉರಿಯಾಗಿ ತಲೆ ನೋಯುತ್ತಿತ್ತು. ಅಪ್ಪ ಮರುದಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಂದರು. ಡಾಕ್ಟರ್ ಎರಡು ಮೂರು ತರಹದ ಔಷಧಿ ಕೊಟ್ಟಿದ್ದರು. ಪುಟ್ಟಿ ಮನೆಗೆ ಬಂದವಳೇ ಚಾದರ ಹೊದೆದು ಮಲಗಿಬಿಟ್ಟಳು. ಅಪ್ಪ ಔಷಧಿಯನ್ನೆಲ್ಲ ಅಜ್ಜಿಯ ಹತ್ತಿರ ಕೊಟ್ಟು ಪುಟ್ಟಿಗೆ ಇವನ್ನೆಲ್ಲ ತಿನ್ನಿಸಲು ಹೇಳಿದ. ಯಾವುದನ್ನು ಯಾವಾಗ ಕೊಡಬೇಕೆಂತಲೂ ತಿಳಿಸಿದ. ಪುಟ್ಟಿಯ ಅಮ್ಮ ಆಫೀಸಿಗೆ ಹೋಗುತ್ತಾಳೆ. ಅವಳು ಬರುವಾಗ ರಾತ್ರಿಯಾಗುತ್ತದೆ. ಅಪ್ಪನಿಗೂ ಆಫೀಸೆ.

ಪುಟ್ಟಿಗೆ ಏನನ್ನೂ ತಿನ್ನಬೇಕು ಅನಿಸುತ್ತಿಲ್ಲ. ಬಾಯಿ ಎಲ್ಲ ಕಹಿ ಕಹಿ. ಅವಳಿಗೆ ಅಜ್ಜಿ ಔಷಧಿ ಕೊಡುವುದು ಬೇಕಾಗಿರಲಿಲ್ಲ. ಕಣ್ಣು ಮುಚ್ಚಿ ಮಲಗಿರಬೇಕು ಅನಿಸುತ್ತಿತ್ತು. ಅಜ್ಜಿ ಆಗಿನಿಂದಲೂ ಈ ಔಷಧ ಒಂದು ಚಮಚ ಕುಡಿ. ಜ್ವರ ಕಡಿಮೆ